# ಪರದೆಗಷ್ಟೇ ಪ್ರತೀಕಾರ



ಸಲೋಮಿ
ಉದಯದ
‘ನಯನತಾರಾ’ದ
ದೀಪಾ

◆ **ನಿಮ್ಮ ಪರಿಚಯ ಹೇಳಿ.**

ಮೂಲತಃ ಮಂಗಳೂರು. ಈಗ ಬೆಂಗಳೂರಿನಲ್ಲಿ ನೆಲೆಸಿದ್ದೇನೆ. ಬಿಕಾಂ ಓದುವಾಗಲೇ ತುಳುವಿನಲ್ಲಿ ಎರಡು ಸಿನಿಮಾಗಳನ್ನು ಮಾಡಿದೆ. ಅದರಿಂದ ಆಲ್ಬಂಗಳನ್ನು ಮಾಡಲು ಸಹಕಾರಿ ಆಯಿತು. ಪದವಿ ಅಧ್ಯಯನ ಮುಗಿಯುವಷ್ಟರಲ್ಲಿ ಸೀರಿಯಲ್‌ಗೆ ಅವಕಾಶ ಸಿಕ್ಕಿತು ಹಾಗಾಗಿ ಈ ಕಡೆ ಬಂದೆ. ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿದ್ದರ ಪರಿಣಾಮ ಅದು ವೃತ್ತಿಯಾಗಿ ಮುಂದುವರಿಯುತ್ತಿದೆ. ನನ್ನ ಮೊದಲ ಧಾರಾವಾಹಿ ಸಿರಿ ಕನ್ನಡದಲ್ಲಿ ಪ್ರಸಾರ ಆದ ‘ಮರೆತು ಹೋದವರು’ ಇದಕ್ಕೆ ಆಡಿಷನ್ ನೀಡಲು ವ್ಯವಸ್ಥಾಪಕ ಅಕ್ಷಯ್ ಮುನ್ನ ಫೋನ್ ಮಾಡಿ ಕರೆದರು. ಅದುವೇ ನನ್ನ ಮೊದಲ ಟೀವಿ ಅನುಭವ. ಅದರ ಬೆನ್ನಿಗೆ ನಿರಂತರವಾಗಿ ಪಾತ್ರಗಳು ಸಿಗುತ್ತಿವೆ. ಈಗ ‘ರಜಿಯಾ ಸುಲ್ತಾನ್’ನಲ್ಲಿ ರಜಿಯಾ ಆಗಿಯೂ ಅಭಿನಯಿಸುತ್ತಿದ್ದೇನೆ.

◆ **ಬಣ್ಣದ ಬದುಕು ನಿಮ್ಮಲ್ಲಿ ಎಂತಹ ಬದಲಾವಣೆ ತಂದಿದೆ?**

ಬಣ್ಣದ ಲೋಕ ಅನ್ನುವುದು ಸೆಲೆಬ್ರಿಟಿ ಜೀವನ. ಅದು ಹೇಗಿದೆ ಅಂದ್ರೆ ಸಂಪೂರ್ಣ ಭಿನ್ನವಾಗಿ ಗೋಚರಿಸುತ್ತದೆ. ವಾಸ್ತವದಲ್ಲಿ ನಾವು ಇರುವ ರೀತಿ, ತೆರೆಯಲ್ಲಿ ಕಾಣಿಸಿಕೊಳ್ಳುವ ಬಗೆ ಬೇರೆ ಬೇರೆ. ಖಾಸಗಿ ಜೀವನಕ್ಕೂ ನಟನೆಗೂ ತುಂಬ ವ್ಯತ್ಯಾಸ ಇರುತ್ತದೆ. ಆದರೆ ಈ ಬದಲಾವಣೆ ಎನ್ನುವುದು ಖುಷಿ ಕೊಡುತ್ತದೆ. ಅಭಿನಯ ಅಥವಾ ನಟನೆ ಎನ್ನುವುದು ನಾವು ಇದ್ದಂತೆ ತೋರಿಸುವುದಲ್ಲ. ಹಾಗೆ ತೋರಿಸಿದರೆ ಅದಕ್ಕೆ ಅಂತಹ ಮಹತ್ವ ಬರುವುದಿಲ್ಲ. ಹಾಗಾಗಿ ನಾಟಕವನ್ನು ಮಾಡಲೇಬೇಕು.

◆ **ನಿಮ್ಮ ಅತ್ಯಾಪ್ತ ಪಾತ್ರ ಯಾವುದು?**

ಈವರೆಗೆ ಸೌಮ್ಯ ಮತ್ತು ಮುಗ್ಧ ಪಾತ್ರಗಳೇ ಸಿಕ್ಕಿವೆ. ದೀಪಾ ಪಾತ್ರವೂ ಆರಂಭದಲ್ಲಿ ಹಾಗೆಯೇ ಇತ್ತು. ಈಗ ಅದು ತನ್ನ ಆಯಾಮವನ್ನು ಬದಲಿಸಿದೆ. ಆರಂಭದಲ್ಲಿ ಮುಗ್ಧಳಾಗಿದ್ದ ಹುಡುಗಿಯ ಪಾತ್ರಗಳನ್ನು ಮಾಡಿದ್ದೆ. ಅನಿವಾರ್ಯ ಸಂದರ್ಭದಲ್ಲಿ ಗಟ್ಟಿ ದನಿಯಲ್ಲಿ ಮಾತನಾಡಿದರೂ ಸ್ವಭಾವತಃ ಒಳ್ಳೆಯ ಗುಣದ ಪಾತ್ರಗಳೇ ಸಿಕ್ಕಿವೆ. ‘ನಯನತಾರಾ’ದಲ್ಲಿ ಹಾಗಲ್ಲ. ಆ ಗುಣ ಸ್ವಭಾವಕ್ಕೆ ವಿರುದ್ಧ, ವಿಲನ್ ಗುಣದ ಹುಡುಗಿ ಹಾಗಾಗಿ ಸವಾಲಿನ ಪಾತ್ರ ಎಂದು ಅನ್ನಿಸಿದೆ. ಈ ಪಾತ್ರ ನನಗೆ ಆಪ್ತ ಎನಿಸಿದೆ. ಸಂಪ್ರದಾಯಗಳ ಬಗ್ಗೆ ನಾನು ಅಷ್ಟಾಗಿ ತಿಳಿದುಕೊಂಡಿರಲಿಲ್ಲ. ಈಗ ಅದಕ್ಕೆಲ್ಲ ತೆರೆದುಕೊಂಡಿದ್ದೇನೆ. ನನ್ನ ಗುರಿ ನಟಿಯಾಗಿ ಇನ್ನೂ ಒಳ್ಳೆಯ ಪಾತ್ರಗಳನ್ನು ನಿರ್ವಹಿಸಬೇಕು ಬೆಳೆಯಬೇಕು. ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ.

◆ **ದೀಪಾ ಪಾತ್ರದ ಬಗ್ಗೆ ಹೇಳಿ?**

ದೀಪಾ ಕೂಡ ಮೊದಲು ತುಂಬ ಶಾಂತ ಗುಣದವಳಾಗಿದ್ದಳು. ಎಲ್ಲರ ಜೊತೆ ಬೆರೆತು ಚೆನ್ನಾಗಿಯೇ ಇದ್ದಳು. ಈಗ ಪಾತ್ರದಲ್ಲಿ ಬದಲಾವಣೆಯಾಗಿದೆ. ಅದಕ್ಕೆ ಕಾರಣ ಆಕೆಯ ಅಣ್ಣನ ಕೊಲೆ. ಅದು ಏಕಾಯಿತು? ಏನಾಯಿತು? ಎನ್ನುವುದು ಆಕೆಗೆ ಗೊತ್ತಿಲ್ಲ. ಅದನ್ನು ಶೋಧಿಸುವ ಕೆಲಸ ಮಾಡುತ್ತಿದ್ದಾಳೆ. ತನ್ನ ಆ ಕೆಲಸವನ್ನು ಸುಲಭ ಮಾಡಿಕೊಳ್ಳಲು ವಿಲನ್ ತಾರಾ ಜೊತೆ ಸ್ನೇಹ ಸಂಬಂಧವನ್ನು ಬೆಸೆದುಕೊಂಡಿದ್ದಾಳೆ. ಅವಳ ಜೊತೆ ಸೇರಿಕೊಂಡು ಹತ್ಯೆಗೆ ಪ್ರತಿಕಾರ ತೆಗೆದುಕೊಳ್ಳಲು ಸಂಚನ್ನು ರೂಪಿಸುವ ಕೆಲಸ ಮಾಡುತ್ತಿದ್ದಾಳೆ.

◆ **ರಿವೇಂಜ್ ತೆಗೆದುಕೊಳ್ಳುವ, ಹಗೆ ಸಾಧಿಸುವ ಬಗ್ಗೆ ನಿಮಗೆ ಏನೆನಿಸುತ್ತದೆ?**

ಖಾಸಗಿಯಾಗಿ ಹೇಳುವುದಾದರೆ ರಿವೇಂಜ್ ತೆಗೆದುಕೊಳ್ಳುವ ಪ್ರಶ್ನೆಯೇ ನನಗೆ ಎದುರಾಗುವುದಿಲ್ಲ. ಸ್ವತಃ ನನಗೆ ತೊಂದರೆ ಮಾಡಿದವರನ್ನೂ ಬೇಗ ಕ್ಷಮಿಸುತ್ತೇನೆ. ಮರು ಕ್ಷಣವೇ ಅವರನ್ನು ಮಾತನಾಡಿಸುತ್ತೇನೆ. ನನಗೆ ಏನೇ ಅನ್ಯಾಯ ಮಾಡಿದ್ದರೂ ಅವರ ಕರ್ಮ ಅವರೇ ಅನುಭವಿಸುತ್ತಾರೆ ಎನ್ನುವುದು ನನ್ನ ಚಿಂತನೆ. ಹಾಗಾಗಿ ರಾಗದ್ವೇಷವನ್ನು ಮುಂದುವರಿಸುವುದಿಲ್ಲ. ನನಗೆ ಮೋಸ ಮಾಡಿದವರಿಗೆ ನಾನೂ ಹಾಗೆಯೇ ಮಾಡಬೇಕು ಎನ್ನುವ ಮನೋಭಾವ ನನಗಿಲ್ಲ. ಹಾಗಾಗಿ ಮರು ಕ್ಷಣವೇ ಅದೆಲ್ಲವನ್ನೂ ಮರೆತುಬಿಡುತ್ತೇನೆ. ಚಿತ್ರೀಕರಣದಲ್ಲಿ ಕ್ರೌರ್ಯ ಮಾಡುತ್ತೇವೆ. ಆದರೆ ಅದು ಪಾತ್ರವಾಗಿ ಕ್ಯಾಮೆರಾ ಎದುರು ಅಭಿನಯಿಸುತ್ತೇನೆ. ಅದನ್ನು ಮನಸಿನಲ್ಲಿ ತೆಗೆದುಕೊಂಡು ಹೋಗುವ ಪ್ರಶ್ನೆ ಬರಲ್ಲ. ಹಿಂಸೆಯೇ ಇರಲಿ, ರಮ್ಯತೆಯೇ ಇರಲಿ, ಅಲ್ಲಿಗೆ ಮಾತ್ರ ಸೀಮಿತ.

◆ **ಏನಾಗಬೇಕು ಎನ್ನುವ ಆಸೆ ನಿಮಗಿತ್ತು? ನಿಮ್ಮ ಕಲೆಯ ಬಗ್ಗೆ ಮನೆಯಲ್ಲಿ ಏನು ಹೇಳುತ್ತಾರೆ?**

ಗಗನ ಸಖಿ ಆಗಬೇಕಿತ್ತು. ದುರಂತ ಎಂದರೆ ಅದಕ್ಕೆ ಬೇಕಾಗುವ ಶಿಕ್ಷಣವನ್ನು ನಾನು ಮಾಡಿಲ್ಲ. ಈಗಲೂ ಬೇಕೆಂದರೆ ಪ್ರಯತ್ನ ಮಾಡಬಹುದು. ಈ ಕ್ಷೇತ್ರಕ್ಕೆ ಬಂದ ಮೇಲೆ ಮತ್ತೆ ಆಕಡೆ ಹೋಗಬೇಕು ಎಂದು ಅನ್ನಿಸುತ್ತಿಲ್ಲ. ಮನೆಯಲ್ಲಿ ಅಮ್ಮ, ಅಕ್ಕ ಸಂಪೂರ್ಣ ಬೆಂಬಲಿಸಿದ್ದಾರೆ. ಈಗಲೂ ಅವರು ನನಗೆ ಪ್ರೇರಕ ಶಕ್ತಿಯಾಗಿದ್ದಾರೆ. ನಾನು ಅಭಿನಯಿಸುವ ಧಾರಾವಾಹಿಗಳನ್ನೇ ನೋಡಲು ಕಾದು ಕುಳಿತಿರುತ್ತಾರೆ. ಅವರಿಬ್ಬರ ಇಷ್ಟದ ಬೇರೆ ಧಾರಾವಾಹಿ ಇದ್ದರೂ ಅದನ್ನು ಮರೆಯುತ್ತಾರೆ. ನನ್ನ ಸ್ನೇಹಿತರು ಕೂಡ ಯಾವತ್ತೂ ವಿರೋಧವನ್ನು ವ್ಯಕ್ತಪಡಿಸಿಲ್ಲ. ಮಾಡುವ ಆಸಕ್ತಿ ಇದೆಯಾ ಮಾಡು ಎಂದೇ ಹುರಿದುಂಬಿಸಿದ್ದಾರೆ.

◆ **ವೃತ್ತಿ ಜೀವನದ ಅನುಭವ ಹೇಳುವುದಾದರೆ?**

ಮಂಗಳೂರಿನಿಂದ ಬೆಂಗಳೂರಿಗೆ ಸಾಗಿ ಬಂದ ಹಾದಿ ದೊಡ್ಡದಿದೆ. ಮೊದಲು ಊರಿನಿಂದಲೇ ಪ್ರಯಾಣ ಮಾಡಿ ಕೆಲಸ ಮಾಡುತ್ತಿದ್ದೆ. ತುಂಬ ಕಷ್ಟ ಇತ್ತು. ಪ್ರಯಾಣದ ವೆಚ್ಚಕ್ಕೂ ತೊಂದರೆ ಕಾಡುತ್ತಿತ್ತು. ರೈಲಿನಲ್ಲಿ ಜನರಲ್ ಕಂಪಾರ್ಟ್‌ಮೆಂಟಿನಲ್ಲಿ ಕುಳಿತುಕೊಳ್ಳಲು ಜಾಗ ಸಿಗದೆ ನಿಂತು ಬಂದಿದ್ದೇನೆ. ಇದು ಹೋಗಿ ಬರುವ ದಾರಿ ಅಲ್ಲ ಎನ್ನುವ ಕಾರಣಕ್ಕೆ ಬೆಂಗಳೂರಿಗೆ ಬರಲೇಬೇಕಾಯಿತು. ಆರಂಭದಲ್ಲಿ ನಾನೊಬ್ಬಳೇ ಬಂದು ಪೇಯಿಂಗ್ ಗೆಸ್ಟ್‌ನಲ್ಲಿ ಇದ್ದೆ. ಈಗ ಅಮ್ಮನನ್ನು ಕರೆದುಕೊಂಡು ಬಂದಿದ್ದೇನೆ. ಅಷ್ಟು ತೊಂದರೆ ಇಲ್ಲ. ಸವಾಲು ಕಡಿಮೆ ಆಗಿ ಆರಾಮಾಗಿದ್ದೇನೆ.

■ **ರಾಘವೇಂದ್ರ ಕೆ.**